.Scanned
21/2

# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಛೇರಿ:
ನಂ–29, ವಿಜಯನಗರ 2ನೇ ಹಂತ,
ಹಿನಕಲ್, ಮೈಸೂರು–5700117
ವೆಬ್ ಸೈಟ್: www.cescmysore.org
CIN:U40109KA2004SGC035177

ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ ಮತ್ತು ಕೊಡಗು,
ಶ್ರೀ ಹರ್ಷರಸ್ತೆ, ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821–2420850, ಫ್ಯಾಕ್ಸ್:0821–2434077
ಈ–ಮೇಲ್: seechnkodagu@cescmysore.org

ಸಂಖ್ಯೆ: ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ–127/2017–18/ eys 234 ದಿನಾಂಕ: 15.02.2018 17
ಲಗತ್ತು:

## ಸಭೆಯ ನಡಾವಳಿಗಳು

ದಿನಾಂಕ: 31.01.2018 ರಂದು ಗೋಣಿಕೊಪ್ಪ ಉಪ ವಿಭಾಗ ಕಛೇರಿಯಲ್ಲಿ ಜನ ಸಂಪರ್ಕ ಸಭೆಯನ್ನು ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಚಾಮರಾಜನಗರ ಕೊಡಗು ರವರ ನೇತೃತ್ವದಲ್ಲಿ ನಡೆಸಲಾಯಿತು. ಗೋಣಿಕೊಪ್ಪ ಉಪ ವಿಭಾಗದ ವಿದ್ಯುತ್ ಗ್ರಾಹಕರು ವಿದ್ಯುಚ್ಛಕ್ತಿಗೆ ಸಂಬಂಧಿಸಿ ನಿವೇದಿಸಿಕೊಂಡ ದೂರುಗಳು ಮತ್ತು ಅವುಗಳ ಇತ್ಯರ್ಥಕ್ಕೆ ಕೈಗೊಂಡ ಕ್ರಮಗಳ ವಿವರಗಳು ಕೆಳಕಂಡಂತಿವೆ.

ಸಭೆಯಲ್ಲಿ ಹಾಜರಿದ್ದವರು.

1. ಶ್ರೀ ಕೆ.ರಾಮಚಂದ್ರ, ಅಧೀಕ್ಷಕ ಇಂಜಿನಿಯರ್(ವಿ), ಚಾಮರಾಜನಗರ ಕೊಡಗು ವೃತ್ತ.
2. ಶ್ರೀ ಸೋಮಶೇಖರ್, ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ಮಡಿಕೇರಿ ವಿಭಾಗ.
3. ಶ್ರೀ. ಪಿ.ಎನ್. ದೇವಯ್ಯ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ),ಮಡಿಕೇರಿ ವಿಭಾಗ.
4. ಶ್ರೀಮತಿ ಆಲ್ಫೋನ್ಸಾ, ಲೆಕ್ಕಾಧಿಕಾರಿಗಳು, ಆಂತರಿಕ ಪರಿಶೋಧನೆ, ಮಡಿಕೇರಿ ವಿಭಾಗ.
5. ಶ್ರೀ.ವಿ.ಎಂ. ನಾಗರಾಜು ಲೆಕ್ಕಾಧಿಕಾರಿಗಳು, ಮಡಿಕೇರಿ ವಿಭಾಗ.
6. ಶ್ರೀ ಎಂ. ಅಂಕಯ್ಯ, ಸ.ಕಾ.ನಿ.ಇಂ(ವಿ), ಗೋಣಿಕೊಪ್ಪಲು.
7. ಶ್ರೀ ಜೆ. ಹೇಮಚಂದ್ರ, ಸ.ಇಂ(ತಾಂ), ಗೋಣಿಕೊಪ್ಪಲು.
8. ಶ್ರೀ ವಿ. ಪಿ. ಜಗದೀಶ್, ಪ್ರಭಾರ ಹಿರಿಯ ಸಹಾಯಕ, ಗೋಣಿಕೊಪ್ಪಲು..
9. ಶ್ರೀ ಎಸ್. ಆರ್. ಕೃಷ್ಣಕುಮಾರ್, ಕಿರಿಯ ಇಂಜಿನಿಯರ್, ಗೋಣಿಕೊಪ್ಪಲು ಶಾಖೆ.
10. ಶ್ರೀ ಎಂ. ಇ. ವಿಜಯ ಕುಮಾರ್, ಶಾಖಾಧಿಕಾರಿ, ಶ್ರೀಮಂಗಲ ಶಾಖೆ.
11. ಶ್ರೀ ಕೆ. ವಿ. ಸೋಮೇಶ್, ಪ್ರಭಾರ ಶಾಖಾಧಿಕಾರಿ ಬಾಳೆಲೆ ಶಾಖೆ.

ಚಾವಿಸನಿನಿ. ನಿಗಮ ಕಾರ್ಯಾಲಯ ಮೈಸೂರು
ಸಂ 3645
ತಾ 19/2/18

**ದಿನಾಂಕ 19.05.2017 ರಂದು ಗೋಣಿಕೊಪ್ಪಲು ಉಪವಿಭಾಗದಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಬಾಕಿ ಉಳಿದಿರುವ ದೂರುಗಳ ವಿವರ**

| ಕ್ರ.ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರಿನ ವಿವರ | ಪ್ರಗತಿಯ ವಿವರ |
|---|---|---|---|
| 1. | ಶ್ರೀ ಟಿ. ಪಿ. ಜಗದೀಶ್, ಧನುಗಾಲ ಗ್ರಾಮ. | *ಬಸಪ್ಪ ಕಾಲೋನಿಯಲ್ಲಿ ವೋಲ್ಟೇಜ್ ಸಮಸ್ಯೆಯ ಬಗ್ಗೆ. | *ಕಾರ್ಯಾದೇಶ ಸಂಖ್ಯೆ ಮಂಜೂರಾಗಿದ್ದು S-237/7.11.2017. ಕೆಲಸ ಕೈಗೆತ್ತಿಕೊಳ್ಳಬೇಕಾಗಿದೆ. |

DGM (comml)
19/2

AGM RAG
20/2

| | | | |
|---|---|---|---|
| 2. | ಶ್ರೀ ಧರ್ಮಜ, ಕಳ್ಮಾಡು ಗ್ರಾಮ. | *ಕಳ್ಮಾಡು ಗ್ರಾಮಕ್ಕೆ ಹೊಸ ಲಿಂಕ್ ಲೈನ್ ಮಾರ್ಗವನ್ನು ಮಂಜೂರು ಮಾಡುವ ಬಗ್ಗೆ. | *4.5ಕಿ.ಮಿ ಉದ್ದದ ಹೊಸ ಲಿಂಕ್ ಲೈನ್ ಮಾರ್ಗದ ಅಂದಾಜು ಪಟ್ಟಿಯನ್ನು ತಯಾರಿಸಿ ದಿನಾಂಕ:11.07.2017 ರಂದು ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿದೆ. ದಿ:10.08.2017 ರಂದು ವೃತ್ತ ಕಛೇರಿಯಿಂದ ವಲಯ ಕಛೇರಿಗೆ ಸಲ್ಲಿಸಲಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೊಸ್ಕರ ಕಾಯಲಾಗುತ್ತಿದೆ. |
| 3. | ಶ್ರೀ ಕೆ. ಪಿ. ಸುಬ್ಬಯ್ಯ, ಕಳ್ಮಾಡು ಗ್ರಾಮ. | *ಮಹದೇಶ್ವರ ದೇವಸ್ಥಾನದ ಹತ್ತಿರ ವೋಲ್ಟೇಜ್ ಸಮಸ್ಯೆಯ ಬಗ್ಗೆ. | *ಹೆಚ್ಚುವರಿ ಪರಿವರ್ತಕದ ಅಂದಾಜು ಪಟ್ಟಿಯನ್ನು ದಿನಾಂಕ: 21-11.2017 ತಯಾರಿಸಿ ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿದೆ. |

**ದಿನಾಂಕ: 08.08.2017ರಂದು ಪಡೆದ ದೂರುಗಳ ವಿವರ:-**

| ಕ್ರ.ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರಿನ ವಿವರ | ತೆಗೆದುಕೊಂಡ ಕ್ರಮ |
|---|---|---|---|
| 1 | ಶ್ರೀ ಕೆ. ಎನ್. ಸಂದೀಪ್ ಮತ್ತು ಇತರರು,ಕಾಕೂರು | ವೋಲ್ಟೇಜ್ ಸಮಸ್ಯೆ ಇರುವುದರಿಂದ ಹೆಚ್ಚುವರಿ ಪರಿವರ್ತಕ ಅಳವಡಿಸಲು ಕೋರಿರುತ್ತಾರೆ. | *ಕಾಮಗಾರಿ ಪ್ರಗತಿಯಲ್ಲಿದೆ. |
| 2 | ಟಿ. ಬಿ. ಬೆಳ್ಳಿಯಪ್ಪ, ಹಾಗೂ ಗ್ರಾಮಸ್ಥರು ಕುಟ್ಟ ಪಟ್ಟಣ. | ಕುಟ್ಟ ಪಟ್ಟಣಕ್ಕೆ ಇರುವ 100 ಕೆ.ವಿ.ಎ. ವಿದ್ಯುತ್ ಪರಿವರ್ತಕವು ಓವರ್ ಲೋಡ್ ನಿಂದ ಪದೇ ಪದೇ ಸುಡುತ್ತಿರುತ್ತದೆ. ಹಾಗೂ ಓಲ್ಟೇಜ್ ಸಮಸ್ಯೆ ಯನ್ನು ಬಗೆಹರಿಸಬೇಕೆಂದು ಕೋರಿರುತ್ತಾರೆ. | *ಕಾಮಗಾರಿ ಪ್ರಗತಿಯಲ್ಲಿದೆ. |
| 3 | ಶ್ರೀ ಸಿ. ಸಿ. ಕುಟ್ಟಪ್ಪ, ಕೋಣಗೇರಿ ಗ್ರಾಮ. | * ಪೊನ್ನಂಪೇಟೆ ಉಪ-ವಿದ್ಯುತ್ ಕೇಂದ್ರದಿಂದ ಹುದಿಕೇರಿ ಪಟ್ಟಣಕ್ಕೆ ಸಂಪರ್ಕ ನೀಡುವ ಎಫ್-6 ಹುದಿಕೇರಿ ಎಕ್ಸ್‌ಪ್ರೆಸ್ ಫೀಡರ್ ಕಾಮಗಾರಿ ವಿಳಂಬವಾಗಿರುವ ಬಗ್ಗೆ.<br><br>* ಕೋಣಗೇರಿ ಮತ್ತು ಸುತ್ತಮುತ್ತಲಿನ ಗ್ರಾಮಗಳ 11 ಕೆ.ವಿ. ಮಾರ್ಗಗಳಲ್ಲಿ ಸೂಕ್ತ ಸ್ಥಳಗಳಲ್ಲಿ ಡಿ.ಓ.ಎಲ್.ಓ ಗಳನ್ನು ಅಳವಡಿಸಲು ಕೋರಿರುವ ಬಗ್ಗೆ.<br><br>* ಹುದಿಕೇರಿ ಗ್ರಾಮದಲ್ಲಿ ಹೊಸದಾಗಿ ಶಾಖಾ ಕಛೇರಿಯನ್ನು ಪ್ರಾರಂಭಿಸುವ ಬಗ್ಗೆ. | *ಸ.ಕಾ.ನಿ.ಇಂ(ವಿ), ಗೋಣಿಕೊಪ್ಪಲು ರವರು ಮಾತನಾಡಿ 7 ಕಂಬಗಳು ಮುರಿದಿದ್ದು ಹಾಗೂ ಎಂ. ಯು. ಎಸ್. ಎಸ್. ನಲ್ಲಿ ಬ್ರೇಕರ್ ಅವಶ್ಯಕತೆ ಇದ್ದು ಫೆಬ್ರವರಿ ಮೊದಲ ವಾರದಲ್ಲಿ ಕೆಲಸ ಪೂರ್ಣಗೊಳಿಸುವುದಾಗಿ ತಿಳಿಸಿದರು.<br><br>*ಕೋಣಗೇರಿ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಅವಶ್ಯಕತೆ ಇರುವ ಕಡೆ ವಿದ್ಯುತ್ ವ್ಯತ್ಯಯ ಆಗದಂತೆ ಸೂಕ್ತ ಸ್ಥಳಗಳಲ್ಲಿ ಡಿ.ಓ.ಎಲ್.ಓ ಗಳನ್ನು ಅಳವಡಿಸಲು ಅಂದಾಜು ಪಟ್ಟಿಯನ್ನು ತಯಾರಿಸಿ ವಿಭಾಗೀಯ ಕಛೇರಿಗೆ ಕಳುಹಿಸಲಾಗಿದೆ.<br><br>* ಹುದಿಕೇರಿ ಗ್ರಾಮದಲ್ಲಿ ಹೊಸ ಶಾಖಾ ಕಛೇರಿಯನ್ನು ರಚನೆ ಮಾಡಲು ಸ್ಥಳ ಪರಿಶೀಲನೆ ಮಾಡಲಾಗಿದೆ. ಶಾಖಾ ಕಛೇರಿಗೆ ಅವಶ್ಯಕತೆ ಇರುವ ಎಲ್ಲಾ ಅಂಕಿಅಂಶಗಳನ್ನು ಸಂಗ್ರಹಿಸುವ ಕೆಲಸ ಪ್ರಗತಿಯಲ್ಲಿರುತ್ತದೆ. |

| | | | |
|---|---|---|---|
| 4 | ಶ್ರೀ ಎಸ್. ಬಿ. ಅಚ್ಚಯ್ಯ, ಬಾಲಾಜಿ ಗ್ರಾಮ. | ತಿತಿಮತಿ ಫೀಡರ್ ನಿಂದ ಸರಬರಾಜಾಗುತ್ತಿರುವ ವಿದ್ಯುತ್ ನಿಂದ ವೋಲ್ಟೇಜ್ ವ್ಯತ್ಯಯ ವಾಗಿರುತ್ತದೆ. ಸಮಸ್ಯೆಯನ್ನು ಪರಿಹರಿಸಲು ಕೋರಿರುತ್ತಾರೆ. | *ಅಂದಾಜು ಪಟ್ಟಿ ತಯಾರಿಸಿ ವಿಭಾಗ ಕಛೇರಿಗೆ ಕಳುಹಿಸಲಾಗಿ ಹೊಸದರ ಪಟ್ಟಿಯಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸಲು ವಿಭಾಗೀಯ ಕಚೇರಿಯಿಂದ ಉಪ-ವಿಭಾಗಕ್ಕೆ ಬಂದಿರುತ್ತದೆ. ಅಂದಾಜು ಪಟ್ಟಿಯನ್ನು ಶಾಖಾಧಿಕಾರಿಯವರಿಗೆ ಕೂಡಲೇ ಸಲ್ಲಿಸಲು ಸೂಚಿಸಲಾಯಿತು. |
| 5 | ಶ್ರೀ ಟಿ. ಬಿ. ಬೆಳ್ಳಿಯಪ್ಪ ಮತ್ತು ಇತರರು, ಕುಟ್ಟ ಗ್ರಾಮ. | ವೋಲ್ಟೇಜ್ ಸಮಸ್ಯೆ ಇರುವುದರಿಂದ ಹೆಚ್ಚುವರಿ ಪರಿವರ್ತಕ ಅಳವಡಿಸಲು ಕೋರಿರುತ್ತಾರೆ. | *ಕಾಮಗಾರಿ ಪ್ರಗತಿಯಲ್ಲಿರುತ್ತದೆ. |
| 6 | ಶ್ರೀ ಬಿ. ಬಿ. ಜನಕ, ಪೊನ್ನಂಪೇಟೆ. | ವೋಲ್ಟೇಜ್ ಸಮಸ್ಯೆ ಇರುವುದರಿಂದ ಹೆಚ್ಚುವರಿ ಪರಿವರ್ತಕ ಅಳವಡಿಸಲು ಕೋರಿರುತ್ತಾರೆ. | *ಕಾಮಗಾರಿ ಪ್ರಗತಿಯಲ್ಲಿರುತ್ತದೆ. |

**ದಿನಾಂಕ: 09.11.2017ರಂದು ಪಡೆದ ದೂರುಗಳ ವಿವರ:-**

| ಕ್ರ.ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರಿನ ವಿವರ | ತೆಗೆದುಕೊಂಡ ಕ್ರಮ |
|---|---|---|---|
| 1 | ಶ್ರೀ ಜಗದೀಶ್, ಧನುಗಾಲ ಗ್ರಾಮ. | ವೋಲ್ಟೇಜ್ ಸಮಸ್ಯೆ ಇರುವುದರಿಂದ ಹೆಚ್ಚುವರಿ ಪರಿವರ್ತಕ ಅಳವಡಿಸಲು ಹಿಂದಿನ ಸಭೆಯಲ್ಲಿ ಕೋರಿದ್ದು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಹಾಗೂ ಮಾರ್ಗದಾಳುಗಳು ತುರ್ತು ಸಂದರ್ಭದಲ್ಲಿ ದೂರವಾಣಿ ಕರೆಗಳನ್ನು ಸ್ವೀಕರಿಸದೇ ಇರುವ ಬಗ್ಗೆ ದೂರಿದರು. | *ಕಾರ್ಯಾದೇಶಸಂಖ್ಯೆ:237 ದಿನಾಂಕ:07.11.2017ರಲ್ಲಿ ದೊರೆತಿರುತ್ತದೆ. ಕಾಮಗಾರಿ ಕೈಗೆತ್ತಿಕೊಳ್ಳಬೇಕಾಗಿದೆ. |
| 2 | ಶ್ರೀ ಪಿ. ಟಿ. ಸುಬ್ಬಯ್ಯ, ಬಾಳೆಲೆ ಗ್ರಾಮ.. | ಕಳೆದ ಎರಡು ವರ್ಷಗಳ ಹಿಂದೆ ಸಂಭವಿಸಿದ ಮಳೆಗಾಳಿಯಿಂದಾಗಿ ಕಂಬಗಳು ಮುರಿದಿದ್ದು, ಈ ಕೆಲಸ ಪೂರ್ಣಗೊಂಡ ಲೇಬರ್ ಅರ್ವಾಡ್ ಬಿಲ್ಲು ಪಾವತಿ ಯಾಗದಿರುವ ಬಗ್ಗೆ ಮಾಹಿತಿ ಕೋರಿರುತ್ತಾರೆ. | *ಕೆಲಸದ ಲೇಬರ್ ಆರ್ವಾಡ್ ಬಿಲ್ಲುಗಳ ನ್ಯೂನತೆಗಳನ್ನು ಸರಿಪಡಿಸಿ ಶಾಖಾಧಿಕಾರಿಯವರು ಖುದ್ದಾಗಿ ವಿಭಾಗ ಕಛೇರಿಗೆ ತಲುಪಿಸಿರುತ್ತಾರೆ. ಅಲ್ಲದೆ ಕೆಲವು ಸಿ.ಆರ್.ಗಳು ಸ್ವೀಕರಿಸಲು (ACEPT) ಆಗಿರುವುದಿಲ್ಲ ಅವುಗಳನ್ನು ಪುನ: ಸರಿಪಡಿಸಿ, ದಿನಾಂಕ:05.01.2018 ರಂದು ವಿಭಾಗ ಕಛೇರಿಗೆ ಸಲ್ಲಿಸಲಾಗಿದೆ. |
| 3 | ಶ್ರೀ ಸಿ. ಸಿ. ಕುಟ್ಟಪ್ಪ, ಕೋಣಗೇರಿ ಗ್ರಾಮ. | ತಮ್ಮ ತೋಟದಲ್ಲಿರುವ ಹಾಲಿ ಪರಿವರ್ತಕವನ್ನು ಮೇಲ್ದರ್ಜೆಗೆ ಏರಿಸಲು ಕೋರಿರುತ್ತಾರೆ. | *ಅಂದಾಜು ಪಟ್ಟಿಯನ್ನು ತಯಾರಿಸಿ ವಿಭಾಗ ಕ್ಛೇರಿಗೆ ಸಲ್ಲಿಸಲಾಗಿದೆ. ವಿಭಾಗೀಯ ಕಛೇರಿಯಿಚಿದ Intimation ನೀಡಲಾಗಿದೆ. ಹಣ ಪಾವತಿಸಿರುವುದಿಲ್ಲ. |
| 4 | ಶ್ರೀ ತಿಮ್ಮಯ್ಯ ಹೆಚ್.ಯು ಮತ್ತು ಶ್ರೀ ಸಿ. ಈ. ನಂದ, ಹಳ್ಳಿಗಟ್ಟು ಗ್ರಾಮ. | ವೋಲ್ಟೇಜ್ ಸಮಸ್ಯೆ ಇರುವುದರಿಂದ ಹೆಚ್ಚುವರಿ ಪರಿವರ್ತಕ ಅಳವಡಿಸಲು ಕೋರಿರುತ್ತಾರೆ. | *ಮಂಜೂರಾತಿ ನೀಡಲಾಗಿದೆ, ಕೆಲಸ ಕೈಗೆತ್ತಿಕೊಳ್ಳಬೇಕು. |

| | | | |
|---|---|---|---|
| 5 | ಶ್ರೀ ಎ.ಪಿ. ಚಂಗಪ್ಪ, ಬೀರುಗ ಗ್ರಾಮ. | ವೋಲ್ಟೇಜ್ ಸಮಸ್ಯೆ ಇರುವುದರಿಂದ ಹೆಚ್ಚುವರಿ ಪರಿವರ್ತಕ ಅಳವಡಿಸಲು ಕೋರಿರುತ್ತಾರೆ. | *ಕಾಮಗಾರಿ ಪ್ರಗತಿಯಲ್ಲಿದೆ. |

**ದಿನಾಂಕ: 31.01.2018 ರಂದು ಪಡೆದ ದೂರುಗಳ ವಿವರ:-**

| ಕ್ರ.ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರಿನ ವಿವರ | ತೆಗೆದುಕೊಂಡ ಕ್ರಮ |
|---|---|---|---|
| 1 | ಶ್ರೀ ಕೇಳಪಂಡ ರಾಜ, ಬಾಲಾಜಿ ಗ್ರಾಮ. | * 11 ಕೆ. ವಿ. ಲೈನ್ ಬಾಗಿದ್ದು ಸರಿಪಡಿಸುವಂತೆ ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಕೂಡಲೆ ಸ್ಥಳ ಪರಿಶೀಲನೆ ನಡೆಸಿ ಅಗತ್ಯ ಕ್ರಮ ಕೈಗೊಂಡು ಬಾಗಿರುವ ಕಂಬವನ್ನು ಸರಿಪಡಿಸುವಂತೆ ಶಾಖಾಧಿಕಾರಿಗಳು ಗೋಣಿಕೊಪ್ಪಲು ರವರಿಗೆ ಸೂಚಿಸಿದರು. |
| 2 | ಶ್ರೀ ಎ. ಕೆ. ಮಂದಪ್ಪ, ಮಾಯಮುಡಿ ಗ್ರಾಮ. | * ಕಳೆದ 3-4 ವರ್ಷಗಳಿಂದ ಅತಿ ಉದ್ದನೆಯ ಮಾರ್ಗ ಹಾಗೂ ಪರಿವರ್ತಕದ ಅಧಿಕ ಭಾರದಿಂದ ಓಲ್ಟೇಜ್ ಸಮಸ್ಯೆ ಉಂಟಾಗಿದ್ದು ಹೆಚ್ಚುವರಿ ಪರಿವರ್ತಕ ಅಳವಡಿಸಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಕೂಡಲೆ ಸ್ಥಳ ಪರಿಶೀಲನೆ ನಡೆಸಿ ಅಗತ್ಯವಿದ್ದರೆ ಹೆಚ್ಚುವರಿ ಪರಿವರ್ತಕಕ್ಕೆ ಅಂದಾಜು ಪಟ್ಟಿ ಸಲ್ಲಿಸಲು ಶಾಖಾಧಿಕಾರಿಗಳು ಗೋಣಿಕೊಪ್ಪಲು ರವರಿಗೆ ಸೂಚಿಸಿದರು. |
| 3 | ಶ್ರೀ ಜೆ. ಸಿ. ಕಾಳಪ್ಪ, ಅರುವತ್ತೊಕ್ಲು ಗ್ರಾಮ. | * ಕಾಡ್ಲಅಯ್ಯಪ್ಪ ರಸ್ತೆಯಲ್ಲಿ ಸಿಂಗಲ್ ಫೇಸ್ ಆಗಿದ್ದು ಮತ್ತು ಹಳೆಯ ಕಂಬಗಳನ್ನು ಬದಲಾಯಿಸಿ ಕೊಡಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಕೂಡಲೆ ಸ್ಥಳ ಪರಿಶೀಲನೆ ನಡೆಸಿ ಅಗತ್ಯಕ್ಕೆ ತಕ್ಕಂತೆ 25 ಕೆ. ವಿ. ಎ. ಪರಿವರ್ತಕವನ್ನು ಮೇಲ್ದರ್ಜೆಗೇರಿಸಲು ಅಥವಾ ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಲು ಹಾಗೂ ಹಳೆಯ ಕಂಬಗಳನ್ನು ಶಿಥಿಲ ಗೊಂಡಿದ್ದರೆ ಬದಲಾಯಿಸಲು ಅಂದಾಜು ಪಟ್ಟಿ ತಯಾರಿಸಲು ಶಾಖಾಧಿಕಾರಿಗಳು ಗೋಣಿಕೊಪ್ಪಲು ರವರಿಗೆ ಸೂಚಿಸಿದರು. |
| 4 | ಶ್ರೀ ಎಂ. ಎಸ್. ಬೋಸ್, ಬೆಕ್ಕೆಸುಡ್ಲೂರು ಗ್ರಾಮ. | * ಮನೆಯ ಹತ್ತಿರ ವಿದ್ಯುತ್ ಮಾರ್ಗವು ತೀರ ಕೆಳಮಟ್ಟದಲ್ಲಿದ್ದು 3 ಕಂಬಗಳ ಅವಶ್ಯಕತೆ ಇರುತ್ತದೆ ಎಂದು ತಿಳಿಸಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ತೀರ ಅವಶ್ಯಕತೆ ಇರುವ ಕಡೆ ಅಧ್ಯತೆಯ ಮೇರೆಗೆ ತಕ್ಷಣ ಮಧ್ಯಂತರ ಕಂಬ ಅಳವಡಿಸಿ ಕ್ರಮ ಕೈಗೊಳ್ಳಲು ಶಾಖಾಧಿಕಾರಿಗಳು ಶ್ರೀಮಂಗಲ ರವರಿಗೆ ಸೂಚಿಸಿದರು. |
| 5 | ಶ್ರೀ ಸಿ. ಎಂ. ಗಣಪತಿ, ಶ್ರೀಮಂಗಲ ಗ್ರಾಮ. | * 2015ರ ಮಾರ್ಚ್ ನಲ್ಲಿ ಸ್ಥಾವರದ ಮಾಪಕವು ಸುಟ್ಟುಹೋಗಿದ್ದು ಮೀಟರ್ ಬದಲಾವಣೆ ಮಾಡಿದ್ದರೂ ಸಹ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಹಾಗೂ ಫೆಬ್ರವರಿ-2017 ರಲ್ಲಿ ಒಟ್ಟು 20000.00 ಬಿಲ್ಲು ಬಂದಿರುವುದಾಗಿ ಸಮಸ್ಯೆ ಸರಿಪಡಿಸಿ ಕೊಡಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಕೂಡಲೇ ಸ್ಥಳ ಪರಿಶೀಲನೆ ನಡೆಸಿ ಮಾಪಕವು ಎಂ. ಎನ್. ಆರ್. ಆಗಿದೆಯೋ ಇಲ್ಲವೋ ಎಂದು ಪರೀಕ್ಷಿಸಿ ಎಂ. ಎನ್. ಆರ್. ಆಗಿದ್ದರೆ ಎಷ್ಟು ಅವಧಿಯಿಂದ ಎಂ. ಎನ್. ಆರ್. ಆಗಿರುವ ಬಗ್ಗೆ ವರದಿಯನ್ನು ನೀಡುವಂತೆ ಶಾಖಾಧಿಕಾರಿಗಳು ಶ್ರೀಮಂಗಲ ರವರಿಗೆ ಸೂಚಿಸಿದರು. |
| 6 | ಶ್ರೀ ನಾರಾಯಣ ಸ್ವಾಮಿ ನಾಯ್ಡು, ಹರಿಶ್ಚಂದ್ರಪುರ. | * ಸಲಹಾ ಸಮಿತಿ ಸದಸ್ಯರಾಗಿದ್ದು ಸಭೆಗೆ ಆಹ್ವಾನ ನೀಡಿರುವುದಿಲ್ಲ ಹಾಗೂ ಹರೀಶ್ಚಂದ್ರಪುರ ಮುಖ್ಯ ರಸ್ತೆಯಲ್ಲಿ ದಾರಿ ದೀಪಗಳು ಕೆಟ್ಟು ಹೋಗಿರುತ್ತದೆ ಎಂದು ಸರಿಪಡಿಸಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಸಲಹಾ ಸಮಿತಿ ಸದಸ್ಯರು ನಿಗಮದ ಒಂದು ಅಂಗವಾಗಿದ್ದು ಸಭೆಗೆ ಪ್ರತ್ಯೇಕ ಆಹ್ವಾನ ನೀಡುವ ಅಗತ್ಯವಿಲ್ಲ ಹಾಗೂ ಸಭೆಯ ಬಗ್ಗೆ ಆಕಾಶವಾಣಿ ಮತ್ತು ದಿನ ಪತ್ರಿಕೆಗಳಲ್ಲಿ ಈಗಾಗಲೇ ಸುದ್ದಿಯನ್ನು ಬಿತ್ತರಿಸಿರುತ್ತಾರೆ. <br> ಮುಂದಿನ ಜನಸಂಪರ್ಕ ಸಭೆಯ ಮಾಹಿತಿಯನ್ನು ಉಪ-ವಿಭಾಗ, ಶಾಖೆಗಳು ಹಾಗೂ |

| | | | |
|---|---|---|---|
| | | | ಸಂಬಂಧಪಟ್ಟ ಗ್ರಾಮ ಪಂಚಾಯ್ತಿ ಸೂಚನಾ ಫಲಕಗಳಲ್ಲಿ ಹಾಕುವಂತೆ ಕ್ರಮ ಕೈಗೊಳ್ಳಲು ಸ.ಕಾ.ನಿ.ಇಂ(ವಿ), ಗೋಣಿಕೊಪ್ಪಲು ರವರಿಗೆ ಸೂಚಿಸಿದರು.<br>ಬೀದಿ ದೀಪಗಳಿಗೆ ಸಂಬಂಧಿಸಿದಂತೆ ಸರಿ ಪಡಿಸುವ ಕೆಲಸ ಸಂಬಂಧಪಟ್ಟ ಗ್ರಾಮ ಪಂಚಾಯ್ತಿ ಕಛೇರಿಯನ್ನು ಸಂಪರ್ಕಿಸಿ ಸರಿಪಡಿಸಿಕೊಳ್ಳಲು ಸೂಚಿಸಿದರು. |
| 7 | ಶ್ರೀ ಬೋಪಣ್ಣ ಮತ್ತು ಇತರರು, ಗೋಣಿಕೊಪ್ಪಲು. | * ಜೂಸ್ ಫ್ಯಾಕ್ಟರಿ ಹತ್ತಿರ ಹೆಚ್ಚುವರಿ ಪರಿವರ್ತಕ ಅಳವಡಿಸುವ ಕಾಮಗಾರಿಯು ನಿಧಾನ ಗತಿಯಲ್ಲಿ ನಡೆಯುತ್ತಿದ್ದು, ಆದಷ್ಟು ಬೇಗ ಕೆಲಸ ಪೂರ್ಣಗೊಳಿಸಿ ಕೊಡಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಉಗ್ರಾಣದಲ್ಲಿ ಸಾಮಗ್ರಿಗಳು ಲಭ್ಯವಿದ್ದು ಕೂಡಲೇ ಪಡೆದು 15 ದಿವಸಗಳಲ್ಲಿ ಕೆಲಸ ಪೂರ್ಣಗೊಳಿಸಲು ಶಾಖಾಧಿಕಾರಿಗಳು ಗೋಣಿಕೊಪ್ಪಲು ರವರಿಗೆ ಸೂಚಿಸಿದರು. |
| 8 | ಶ್ರೀ ಐ. ಕೆ. ಬಿದ್ದಪ್ಪ, ಗೋಣಿಕೊಪ್ಪಲು. | * ಗೋಣಿಕೊಪ್ಪಲಿನ 1ನೇ ವಿಭಾಗದಲ್ಲಿ ಕಂಬ ಮುರಿದು, ಬದಲಾಯಿಸುವ ಸಂದರ್ಭದಲ್ಲಿ ಕಂಬ ಸ್ಥಳಾಂತರ ವಾಗಿದ್ದು ಇದರಿಂದ ತೊಂದರೆ ಯಾಗಿರುತ್ತದೆ ಎಂದು ದೂರನ್ನು ನೀಡಿರುತ್ತಾರೆ.<br>* ಕೋಣಗೇರಿ ಗ್ರಾಮದಲ್ಲಿ ವೈಯರ್ ತೀರಾ ಕೆಳಮಟ್ಟದಲ್ಲಿದ್ದು (ಬಾಬಾ ಎಸ್ಟೇಟ್ ಹತ್ತಿರ) ನಾಲ್ಕು ಕಂಬದ ಅವಶ್ಯಕತೆ ಇರುತ್ತದೆ ಎಂದು ತಿಳಿಸಿರುತ್ತಾರೆ.<br>ಕೋಣಗೇರಿ ಗ್ರಾಮದಲ್ಲಿ ಪರಿವರ್ತಕವು ತೀರಾ ಶಿಥಿಲಾವಸ್ಥೆಯಲ್ಲಿದ್ದು ಸರಿಪಡಿಸಿ ಕೊಡಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಸದರಿ ಸ್ಥಳಾಂತರ ವಾಗಿರುವ ಕಂಬವನ್ನು ಸೂಕ್ತಸ್ಥಳಕ್ಕೆ ಹಾಕಿ ಸಮಸ್ಯೆ ಪರಿಹರಿಸಿ ಕೊಡಲು ಶಾಖಾಧಿಕಾರಿಗಳು ಗೋಣಿಕೊಪ್ಪಲು ರವರಿಗೆ ಸೂಚಿಸಿದರು.<br>* ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ವೈಯರ್ ತೀರಾ ಕೆಳಮಟ್ಟದಲ್ಲಿರುವ ಕಡೆ ತಕ್ಷಣ ಮಧ್ಯಂತರ ಕಂಬ ಅಳವಡಿಸಿ ಸರಿಪಡಿಸಲು ಹಾಗೂ ಪರಿವರ್ತಕದ ವೈಯರಿಂಗ್ ಅನ್ನು ಹೊಸದಾಗಿ ಮಾಡಲು ಶಾಖಾಧಿಕಾರಿಗಳು ಶ್ರೀಮಂಗಲ ರವರಿಗೆ ಸೂಚಿಸಿದರು. |
| 9 | ಶ್ರೀ ಬಿ. ಟಿ. ಮುತ್ತಣ್ಣ, ತೆರಾಲು ಗ್ರಾಮ. | * ತೆರಾಲು ಲಿಂಕ್ ಲೈನ್ ಕಾಮಗಾರಿಯು ಯಾವ ಹಂತದಲ್ಲಿದೆ ಎಂದು ಮಾಹಿತಿಯನ್ನು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಸದರಿ ಕಾಮಗಾರಿಯ ಅಂದಾಜು ಪಟ್ಟಿ ಹೊಸ ದರಪಟ್ಟಿಯಂತೆ ಪರಿಷ್ಕರಣೆಗೊಳಿಸಲು ವಾಪಸ್ ನೀಡಿದ್ದು, ಹೊಸ ದರಪಟ್ಟಿಯಂತೆ ಅಂದಾಜು ಪಟ್ಟಿ ತಯಾರಿಸಿ ಕೂಡಲೇ ಸಲ್ಲಿಸಲು ಶಾಖಾಧಿಕಾರಿಗಳು ಶ್ರೀಮಂಗಲ ರವರಿಗೆ ಸೂಚಿಸಿದರು. |
| 10 | ಶ್ರೀ ಬೋಪಯ್ಯ ಮತ್ತು ಇತರರು, ಬಾಳೆಲೆ, ಕಾನೂರು. | * ಬಾಳೆಲೆ ಗ್ರಾಮಕ್ಕೆ ಹೊಸ ಫೀಡರ್ ಅಳವಡಿಸುವ ಕಾರ್ಯಕ್ಕೆ ನಿರಂತರ ಎಲ್.ಸಿ. ಯನ್ನು ಪಡೆಯುತ್ತಿದ್ದು, ಅಡಚಣೆಯನ್ನು ಕಡಿಮೆ ಮಾಡಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಈ ಸಂದರ್ಭದಲ್ಲಿ ಎಲ್. ಸಿ. ಯನ್ನು ಪಡೆಯದೆ ಮಾಡುವ ಕೆಲಸಗಳನ್ನು ಪೂರ್ಣಗೊಳಿಸಲು ಹಾಗೂ ತದನಂತರ ಕಡಿಮೆ ಅಡಚಣೆಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸಂಬಂಧಪಟ್ಟ ಗುತ್ತಿಗೆ ದಾರರಿಗೆ ದೂರವಾಣಿ ಮುಖಾಂತರ ಸೂಚನೆ ನೀಡಿರುತ್ತಾರೆ. |
| 11 | ಶ್ರೀ ಕೆ. ಎಂ. ಕೃಷ್ಣಮೂರ್ತಿ, ಕಳ್ಮಾಡು ಗ್ರಾಮ. | * ತಮ್ಮ ನೀರಾವರಿ ಸ್ಥಾವರಕ್ಕೆ ಬಿಲ್ಲು ನೀಡಲಾಗುತ್ತಿದ್ದು ಭತ್ತದ ಬೇಸಾಯಕ್ಕೆ ಎಂದು ಸರಿಪಡಿಸಿ ಕೊಡಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಸ್ಥಾವರದ ಸಂಪರ್ಕ ನೀಡುವ ಸಂಧರ್ಭದಲ್ಲಿ ಸಲ್ಲಿಸಿದ ದಾಖಲೆಯಂತೆ ಕಾಫಿ ಬೆಳೆಗಾಗಿ ಉಪಯೋಗಿಸುತ್ತಿರುವುದರಿಂದ ಬಿಲ್ಲನ್ನು ನೀಡಲಾಗುತ್ತಿದ್ದು, ಆರ್. ಟಿ. ಸಿ. ಯಲ್ಲಿ ಬದಲಾವಣೆ ಮಾಡಿ ದಾಖಲಾತಿಯನ್ನು ಸಲ್ಲಿಸಿದಲ್ಲಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. |

| | | | |
|---|---|---|---|
| 12 | ಶ್ರೀ ಮಹೇಶ್, ಈಚೂರು ಗ್ರಾಮ. | * ಮನೆಗೆ ಹೊಸದಾಗಿ ವಿದ್ಯುತ್ ಸಂಪರ್ಕಕಾಗಿ ಅರ್ಜಿ ಸಲ್ಲಿಸಿದ್ದು ಸಂಪರ್ಕ ನೀಡಿರುವುದಿಲ್ಲ ಎಂದು ದೂರನ್ನು ನೀಡಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಡಿ.ಡಿ.ಯು.ಜಿ.ಜೆ.ವೈ. ಯೋಜನೆಯ ಕಾಮಗಾರಿಗೆ ಟೆಂಡರ್ ದೊರೆತ್ತಿದ್ದು ಕೆಲಸ ಪ್ರಗತಿಯಲ್ಲಿರುತ್ತದೆ. ಈ ಸಂಧರ್ಭದಲ್ಲಿ ಗ್ರಾಹಕರ ಮನೆಗೆ ವಿದ್ಯುತ್ ಸಂಪರ್ಕ ನೀಡಲು ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿ ಗೋಣಿಕೊಪ್ಪಲು ರವರಿಗೆ ಸೂಚಿಸಿದರು. |
| 13 | ಶ್ರೀ ಬೋಪಯ್ಯ, ಕೋಟೂರು ಗ್ರಾಮ. | * ಮಲ್ಲೂರು ಓಲ್ಟೇಜ್ ಸಮಸ್ಯೆ ಇದ್ದು ಹೊಸ ಪರಿವರ್ತಕವನ್ನು ಅಳವಡಿಸಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಕಾಮಗಾರಿಗೆ ಈಗಾಗಲೇ ಕಾರ್ಯದೇಶ ದೊರೆತ್ತಿದ್ದು ಕೂಡಲೇ ಕೆಲಸ ಕೈಗೆತ್ತಿಕೊಳ್ಳಲು ಶಾಖಾಧಿಕಾರಿ ಬಾಳೆಲೆ ರವರಿಗೆ ಸೂಚಿಸಿದರು. |
| 14 | ಶ್ರೀ ಸಿ. ಎಸ್. ಬೋಪಣ್ಣ, ತಿತಿಮತಿ ಗ್ರಾಮ. | * ಗ್ರಾಮದಲ್ಲಿ ಅಳವಡಿಸಿರುವ ಪರಿವರ್ತಕ ಹಾಗೂ ವೈರ್ ಹಳೆಯದಾಗಿದ್ದು ಬದಲಾಯಿಸಿಕೊಡಲು ಹಾಗೂ ಕೆಟ್ಟುಹೋದ ಮಾಪಕವನ್ನು ಬದಲಾಯಿಸಿ ಕೊಡಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಕೂಡಲೆ ಸ್ಥಳ ಪರಿಶೀಲನೆ ನಡೆಸಿ ಅಗತ್ಯವಿದ್ದರೆ ಹೆಚ್ಚುವರಿ ಪರಿವರ್ತಕಕ್ಕೆ ಅಂದಾಜು ಪಟ್ಟಿ ಸಲ್ಲಿಸಲು ಹಾಗೂ ಮಾಪಕವನ್ನು ಪರೀಕ್ಷಿಸಿ ದೋಷಪೂರಿತ ವಾಗಿದ್ದಲ್ಲಿ ಬದಲಾಯಿಸಲು ಶಾಖಾಧಿಕಾರಿಗಳು ಗೋಣಿಕೊಪ್ಪಲು ರವರಿಗೆ ಸೂಚಿಸಿದರು. |
| 15 | ಶ್ರೀ ರವೀಂದ್ರ ಎಂ. ಎಂ., ತಿತಿಮತಿ ಗ್ರಾಮ. ಶ್ರೀ ಅನುಪ್ ಕುಮಾರ್, ತಿತಿಮತಿ ಗ್ರಾಮ. | * ತಿತಿಮತಿ ಎಕ್ಸ್‌ಪ್ರಸ್ ಕಾಮಗಾರಿಯ ಪ್ರಗತಿಯ ಬಗ್ಗೆ ಕೋರಿರುತ್ತಾರೆ. | *ಕಾಮಗಾರಿಯು ಪ್ರಗತಿಯಲ್ಲಿದ್ದು ಕಂಬಗಳನ್ನು ಸ್ಥಳಕ್ಕೆ ಸಾಗಿಸಲಾಗಿದೆ. |
| 16 | ಶ್ರೀ ಧರ್ಮಜ, ಕಳ್ಳಾಡು ಗ್ರಾಮ. | * ಆನೆ ಕಾರಿಡಾರ್ ಕಾಮಗಾರಿಯ ಪ್ರಗತಿಯ ಬಗ್ಗೆ ಹಾಗೂ ಅತೀ ಹೆಚ್ಚು ಅಡಚಣೆ ಯಾಗುತ್ತಿದ್ದು ಪ್ರತ್ಯೇಕ ಮಾರ್ಗ ಅಳವಡಿಸಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಆನೆ ಕಾರಿಡಾರ್ ಕಾಮಗಾರಿಯು ಪ್ರಗತಿಯಲ್ಲಿದ್ದು ಗ್ರಾಹಕರು ಸೂಚಿಸಿದ ಸ್ಥಳಗಳಲ್ಲಿ ಮಧ್ಯಂತರ ಕಂಬ ಅಳವಡಿಸಲು ಹಾಗೂ ಪ್ರತ್ಯೇಕ ಲೈನ್ ಬದಲು ಡಿ. ಓ. ಎಲ್. ಓ ಅನ್ನು ಅಳವಡಿಸಿ ಮಾರ್ಗದಲ್ಲಿ ಆಗುತ್ತಿರುವ ಅಡಚಣೆಯನ್ನು ಕಡಿಮೆ ಮಾಡಲು ಶಾಖಾಧಿಕಾರಿ ಗೋಣಿಕೊಪ್ಪಲು ರವರಿಗೆ ಸೂಚಿಸಿದರು. |
| 17 | ಶ್ರೀ ಸಿ.ಎಸ್. ಮುದ್ದಪ್ಪ, ಮತ್ತು ಅಪ್ಪಯ್ಯ, ಇತರರು, ಮಾಯಮುಡಿ ಗ್ರಾಮ. | * ಮಾಯಮುಡಿ ಗ್ರಾಮದ ಮುದ್ದಮಯ್ಯ ಟಿ.ಸಿ.ಯಲ್ಲಿ ಓಲ್ಟೇಜ್ ಸಮಸ್ಯೆ ಇದ್ದು ಹೊಸ ಪರಿವರ್ತಕವನು ಅಳವಡಿಸಲು ಕೋರಿರುತ್ತಾರೆ. ಹಾಗೂ ಕನ್ನಬಾಡಿ ಗ್ರಾಮ ಪಳ್ಳಿ ಪರಿವರ್ತಕದಲ್ಲಿ ಗೈ ವೈರ್ ರಸ್ತೆಗೆ ಹಾಕಿದ್ದು, ತೀರಾ ಅಪಾಯ ಉಂಟಾಗುವ ಸಂಭವವಿದ್ದು ತೆರವು ಗೊಳಿಸಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಕೂಡಲೆ ಸ್ಥಳ ಪರಿಶೀಲನೆ ನಡೆಸಿ ಅಗತ್ಯವಿದ್ದರೆ ಹೆಚ್ಚುವರಿ ಪರಿವರ್ತಕಕ್ಕೆ ಅಂದಾಜು ಪಟ್ಟಿ ಸಲ್ಲಿಸಲು ಹಾಗೂ ಗೈ ವೈರ್ ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸಲು ಶಾಖಾಧಿಕಾರಿಗಳು ಗೋಣಿಕೊಪ್ಪಲು ರವರಿಗೆ ಸೂಚಿಸಿದರು. |
| 18 | ಶ್ರೀ ಎ. ಎಂ. ಚಂಗಪ್ಪ, ಮತ್ತು ಕುರ್ಚಿ ಗ್ರಾಮಸ್ಥರು. | * ಕುರ್ಚಿ ಗ್ರಾಮದ ಹ್ಯಾರಿ ಟಿ.ಸಿ.ಯಲ್ಲಿ ಓಲ್ಟೇಜ್ ಸಮಸ್ಯೆ ಇದ್ದು ಹೊಸ ಪರಿವರ್ತಕವನ್ನುಅಳವಡಿಸಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಕೂಡಲೆ ಸ್ಥಳ ಪರಿಶೀಲನೆ ನಡೆಸಿ ಅಗತ್ಯವಿದ್ದರೆ ಹೆಚ್ಚುವರಿ ಪರಿವರ್ತಕಕ್ಕೆ ಅಂದಾಜು ಪಟ್ಟಿ ಸಲ್ಲಿಸಲು ಶಾಖಾಧಿಕಾರಿ ಶ್ರೀಮಂಗಲ ರವರಿಗೆ ಸೂಚಿಸಿದರು. |

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

**ಪ್ರತಿಯನ್ನು:**

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಮಡಿಕೇರಿ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಗೋಣಿಕೊಪ್ಪ ಉಪವಿಭಾಗ ರವರ ಮಾಹಿತಿಗಾಗಿ.
7. ಹಿಆಸ/ಪ್ರಕ/ಕಡತ.

98v